ಕರ್ನಾಟಕ ವಿಧಾನ ಸಭೆ, ಸಂಶೋಧನಾ ಮತ್ತು ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ______

ಪತ್ರಿಕೆಯ ಹೆಸರು : NAME OF THE NEWS PAPER: ______ ದಿನಾಂಕ : DATE : 11/10/2019

# ಮಾಜಿ ಮುಖ್ಯ ಚುನಾವಣಾ ಆಯುಕ್ತ ಶೇಷನ್ ಇನ್ನಿಲ್ಲ



ನವದೆಹಲಿ: ಮಾಜಿ ಮುಖ್ಯ ಚುನಾವಣಾ ಆಯುಕ್ತ ಟಿ.ಎನ್.ಶೇಷನ್ ಅವರು ಭಾನುವಾರ ರಾತ್ರಿ ನಿಧನರಾಗಿದ್ದಾರೆ.

ತಮಿಳುನಾಡಿನ 1955ರ ಬ್ಯಾಚಿನ ಭಾರತೀಯ ಆಡಳಿತಾತ್ಮಕ ಸೇವಾಧಿಕಾರಿ (ಐಎಎಸ್)ಯಾಗಿದ್ದ ತಿರುನಲ್ಲೇಲಿ ನಾರಾಯಣನ್ ಅಯ್ಯರ್ ಶೇಷನ್(86) ಅವರು ಭಾರತೀಯ ಚುನಾವಣಾ ಕ್ಷೇತ್ರದಲ್ಲಿ ಬಹಳಷ್ಟು ಸುಧಾರಣೆ ತಂದವರು.

ಕೇಂದ್ರಸರ್ಕಾರದಲ್ಲಿ 18ನೇ ಸಂಪುಟ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದ ಅವರು, 1996ರಲ್ಲಿ ರಾಮನ್ ಮ್ಯಾಗಸ್ಸೆಸ್ ಪ್ರಶಸ್ತಿಗೂ ಪಾತ್ರರಾಗಿದ್ದರು. ಭಾರತ ಸರ್ಕಾರದಲ್ಲಿ ಅವರು ಸಲ್ಲಿಸಿದ್ದ ಅತ್ಯುತ್ತಮ ಸೇವೆಗಾಗಿ ಈ ಪ್ರಶಸ್ತಿ ನೀಡಲಾಗಿತ್ತು.

ಶೇಷನ್ ಸಾವಿನ ಸುದ್ದಿಯನ್ನು ಟ್ವಿಟರ್ ಮುಖಾಂತರ ಬಹಿರಂಗ ಮಾಡಿರುವ ಮತ್ತೊಬ್ಬ ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಶಿ, ಶೇಷನ್ ಈಗಷ್ಟೇ ನಿಧನರಾಗಿದ್ದಾರೆಂದು ಹೇಳಲು ವಿಷಾದವಾಗುತ್ತದೆ. ಯಶಸ್ಸಿನ ಹಾದಿಯಲ್ಲಿ ಸಾಗುತ್ತಿರುವವರೆಲ್ಲರಿಗೂ ಅವರೊಬ್ಬ ಅತ್ಯುತ್ತಮ ಮಾರ್ಗದರ್ಶಕ ಹಾಗೂ ನೈಜ ದಂತಕಥೆ ನಾಯಕ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ ಎಂದಿದ್ದಾರೆ.

5